ಸಿ.ಸಿ ನಂಬ್ರ: 1111/2023
ಡಿ.ಡಬ್ಲ್ಯೂ ಃ 1

ದಿನಾಂಕಃ 10-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು ಃ ದೂರುದಾರ ಪರ ಶ್ರೀ ಎಂ ಎಂ ಹೆಚ್ ವಕೀಲರಿಂದ

ಆರೋಪಿತ ಸಾಗರ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಪಿಗ್ಮಿ ಹಣವನ್ನು ಸಂಗ್ರಹಿಸುತ್ತಿದ್ದ. ದೂರುದಾರರ ಪಾಟಿ ಸವಾಲು ಮಾಡಲು ವಿಚಾರವನ್ನು ನಾನೇ ನಮ್ಮ ವಕೀಲರಿಗೆ ಹೇಳಿರುತ್ತೇನೆ. ಆರೋಪಿತನಿಗೆ ನೋಟೀಸು ಬಂದ ವಿಚಾರವನ್ನು ನನಗೆ ಆತ ತಿಳಿಸಿರುವುದಿಲ್ಲ. ಆರೋಪಿತ ನನ್ನ ತಮ್ಮ ದೂರುದಾರನಿಂದ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ. ನನ್ನ ಬಳಿ ಸಾಲ ತೆಗೆದುಕೊಂಡಿರುವುದಿಲ್ಲ ಎಂದು ಹೇಳಿರುತ್ತಾನೆ.

2. ಮೂರು ಚೆಕ್ಕನ್ನು ಆರೋಪಿತ ಸೈನ್ ಮಾಡಿ ಕೊಟ್ಟಿರುತ್ತೇನೆ ಎಂದು ನನ್ನ ಬಳಿ ಹೇಳಿರುತ್ತಾನೆ. ಯಾವ ತಿಂಗಳು ಹಾಗೂ ದಿನಾಂಕ ಕೊಟ್ಟಿದ್ದ ಎಂದು ನನ್ನ ಬಳಿ ಹೇಳಿರುವುದಿಲ್ಲ. ಆರೋಪಿತ ಹಾಗೂ ಪಿರ್ಯಾದಿಯ ನಡುವೆ ಏನು ವ್ಯವಹಾರ ಇದೆ ಎಂಬ ಬಗ್ಗೆ ಮಾಹಿತಿ ಇರುತ್ತದೆ. ಮೂರು ಚೆಕ್ಕುಗಳನ್ನು ವಾಪಾಸು ತೆಗೆದುಕೊಳ್ಳಲು ಯಾವುದಾದರು ಕ್ರಮ ಕೈಗೊಂಡಿರುತ್ತಾನಾ ಎಂದರೆ ಸಾಕ್ಷಿ ಅವರನೊಟ್ಟಿಗೆ ವ್ಯವಹಾರ ಇದ್ದುದರಿಂದ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನುಡಿಯುತ್ತಾರೆ.

3. ಸತೀಶ್ ಪೂಜಾರಿ ಇರವರು ನನ್ನ ತಮ್ಮನಿಗೆ ಚೆಕ್ಕು ಕೊಡುತ್ತಿದ್ದರು, ಅದನ್ನು ಆರೋಪಿತ ನನ್ನ ತಮ್ಮ ನಗದು ಮಾಡಿಕೊಂಡು ಅವರು ಹೇಳಿದಂತಹ ವ್ಯಕ್ತಿಗಳಿಗೆ ಕೊಡುತ್ತಿದ್ದ. ಮತ್ತೆ ಸಂಜೆ ಹಣವನ್ನು ಸಂಗ್ರಹಿಸಿ ಪಿರ್ಯಾದಿದಾರರಿಗೆ ಕೊಡುತ್ತಿದ್ದ. ನನ್ನ ತಮ್ಮ ಯಾರಿಗೆ ಎಷ್ಟು ಹಣವನ್ನು ಪಿರ್ಯಾದಿದಾರ ಕೊಟ್ಟ ಮೇರೆಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತಾನೆ ಎಂಬುದನ್ನು ನನ್ನ ಬಳಿ ಹೇಳಿರುವುದಿಲ್ಲ. ಭದ್ರತೆಗಾಗಿ ಕೊಟ್ಟಂತಹ 03 ಚೆಕ್ಕುಗಳಲ್ಲಿ 2 ಚೆಕ್ಕಿನ ಮೇಲೆ ಪ್ರಕರಣ ದಾಖಲಿಸಿದ್ದು ಇನ್ನೊಂದು ಚೆಕ್ಕು ಎಲ್ಲಿ ಇರುತ್ತದೆ ಎಂದರೆ ಸಾಕ್ಷಿ ನಾನು ಅವನನ್ನು ಕೇಳಬೇಕು ಎನ್ನುತ್ತಾರೆ. ಸಾಕ್ಷಿ ಪುನಃ ಸತೀಶ್ ಪೂಜಾರಿಯನ್ನು ಕೇಳಬೇಕು ಎಂದು ನುಡಿಯುತ್ತಾರೆ. ಭದ್ರತೆಗಾಗಿ ಕೊಟ್ಟಂತಹ ಚೆಕ್ಕಿಗೆ ಸಂಬಂದಪಟ್ಟಂತೆ ಆರೋಪಿತ ದೂರುದಾರನಿಗೆ ಹಣ ಕೊಡಬೇಕಾಗಿರುತ್ತದಾ ಎಂದರೆ ಸಾಕ್ಷಿ ಯಾವುದೇ ಹಣ ಕೊಡುವುದು ಇರುವುದಿಲ್ಲ ಎಂದು ನುಡಿಯುತ್ತಾರೆ.

4. ಸತೀಶ್ ಪೂಜಾರಿಯವರು ಯಾರು ಯಾರಿಗೆ ಎಷ್ಟು ಹಣ ಕೊಡು ಎಂದು ಆರೋಪಿತ ಮುಖಾಂತರ ಭದ್ರತೆಗೆ ತೆಗದುಕೊಂಡು ಕೊಟ್ಟಿರುತ್ತಾರೆ ಎಂಬುವ ವಿಚಾರ ನನಗಿಂತ ಆರೋಪಿತನಿಗೆ ಚೆನ್ನಾಗಿ ಗೊತ್ತಿರುತ್ತದೆ. ನನ್ನ ತಮ್ಮನಿಗೆ ಪ್ರಶ್ನೆ ಕೇಳಿದರೆ ಉತ್ತರ ಕೊಡಲು ಸಾಮರ್ಥ ಇರುತ್ತದೆ. 2020 ರಲ್ಲಿ ಪಿರ್ಯಾದಿ ಹಾಗೂ ಆರೋಪಿತನ ನಡುವೆ ಗಲಾಟೆ ಆಗಿರುತ್ತದೆ. ಮಾತು ಮಾತಿನಲ್ಲಿ ಜಗಳವಾಗಿರುತ್ತದೆ, ಹೊಡೆದಾಟ ಆಗಿರುವುದಿಲ್ಲ. 2 ಚೆಕ್ಕು ನನ್ನ ಬಳಿ ಇದೆಯಲ್ಲಾ, ನಿನ್ನ ಮೇಲೆ ಕೇಸು ಹಾಕಿ ಆಟ ಆಡಿಸುತ್ತೇನೆ ಎಂದು ಹೇಳಿರುತ್ತಾನೆ. ಈ ವಿಚಾರ ನನಗೆ ಆರೋಪಿತ ನನ್ನ ತಮ್ಮ ಹೇಳಿರುತ್ತಾನೆ.

5. ಸತೀಶ್ ಪೂಜಾರಿ ಪಡೆದ ಸಾಲಕ್ಕೆ ಬ್ಯಾಂಕಿನಲ್ಲಿ ಆಸ್ತಿ ಜವಾಬ್ದಾರಿ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಕೇಳಬೇಕು ಎಂದು ನುಡಿಯುತ್ತಾರೆ. ಎಲ್ಲಾ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಇಂತ ಉಂಟು, ಇಂತ ಉಂಟು ಎಂದು ಆರೋಪಿತ ನಮ್ಮ ಮನೆಯಲ್ಲಿ ಹೇಳುತ್ತಿದ್ದ ಎನ್ನುತ್ತಾರೆ. 2018 ರಿಂದ 2019 ರವರೆಗೆ ಆರೋಪಿತ ದೂರುದಾರರ ಬಳಿ ವ್ಯವಹಾರಕ್ಕೆ ಎಂದು ಸಾಲ ತೆಗೆದುಕೊಂಡು ಮರುಪಾವತಿಗೆ ಚೆಕ್ಕನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ರೂ.20,80,500/- ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ ಸಾಲವನ್ನು ಪಡೆದಿರುವುದಿಲ್ಲ, ಆಟೋ ಓಡಿಸುವವನಿಗೆ 18-20 ಲಕ್ಷ ಸಾಲ ಯಾಕೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ